ಓ. ಎಸ್. ನಂಃ 52/2020

ಪಿ.ಡಬ್ಲ್ಯೂಃ 1

ದಿಃ **21-11-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1, 3** ರಿಂದ **15** ನೇ ಪ್ರತಿವಾದಿಗಳ ಪರ ಶ್ರೀ ಪಿ. ವಿ. ಕೆ. ವಕೀಲರಿಂದಃ

ನಾನು, ನನ್ನ ತಮ್ಮ ಹಾಗೂ ನಮ್ಮ ತಾಯಿ 50 ವರ್ಷದಿಂದ ಮನೆಯಲ್ಲಿ ಇರುತ್ತೇವೆ. 30 ವರ್ಷದಿಂದ ನಮ್ಮ ತಂದೆಯ ಸಹೋದರರು ಬೇರೆ ಇರುತ್ತಾರೆ. ಊಟ, ವಸತಿ ಹಾಗೂ ವ್ಯವಹಾರ ಬೇರೆ ಬೇರೆ ಇರುತ್ತದೆ ಎನ್ನುವುದು ನಿಜ. ಪಡಿತರ ಚೀಟಿ ಬೇರೆ ಬೇರೆ ಇರುತ್ತವೆ ಎನ್ನುವುದು ನಿಜ. ನಮ್ಮ ತಂದೆ ಇವರ ಹೆಸರಿಗೆ ಹಾಗೂ ಅವರ ಸಹೋದರರ ಹೆಸರಿಗೆ ಖಾತೆ ಪಹಣಿ ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇರುವವರೆಗೆ ಮನೆಯ ವ್ಯವಹಾರವನ್ನು ನಮ್ಮ ತಂದೆ ಮಾಡುತ್ತಿದ್ದ. ನಾನು ವ್ಯವಸಾಯವನ್ನು ಮಾಡುತ್ತಿದ್ದೇನೆ. ನಮಗೆ 1 ವರೆ ಎಕರೆ, ಈರಪ್ಪ ಇವರಿಗೆ 1 ವರೆ ಎಕರೆ, ಬಸಪ್ಪ ಇವರಿಗೆ 1 ವರೆ ಎಕರೆ ಜಮೀನು ಇರುತ್ತದೆ. ಸದರಿ ಜಮೀನನ್ನು ನಮ್ಮ ತಂದೆ, ನಾವು ಹಾಗೂ ನಮ್ಮ ದೊಡ್ಡಪ್ಪಂದಿರು ದುಡಿದು ಹಿಡಿದಿರುತ್ತೇವೆ. ನಮ್ಮ ಪ್ರತ್ಯೇಕ ವ್ಯವಹಾರ ಮಾಡಿಕೊಳ್ಳುವ ಸಲುವಾಗಿ 1 ವರೆ ಎಕರೆ ಜಮೀನನ್ನು ಪ್ರತ್ಯೇಕ ಮಾಡಿಕೊಂಡಿರುತ್ತೇವೆ. ಆ ರೀತಿ ಮಾಡಲು ಪ್ರಾರಂಭಿಸಿ 30 ವರ್ಷ ಆಗಿರುತ್ತದೆ. ಜಮೀನನ್ನು ಬಿಟ್ಟು ಉತ್ಪನ್ನದ ಬೇರೆ ಮಾರ್ಗಗಳು ಇರುವುದಿಲ್ಲ. ಸೋಮಪ್ಪ ಹಾಗೂ ಮಲ್ಲೇಶಪ್ಪ ಇವರು ನಮ್ಮ ದೊಡ್ಡಪ್ಪಂದಿರು. ಅವರು ವರಹ ಗ್ರಾಮದಲ್ಲಿ ವ್ಯವಸಾಯವನ್ನು ಮಾಡುತ್ತಾರೆ. ಅವರು ಬೇರೆ ಬೇರೆ ಇರುತ್ತಾರೆ. ಅವರು 30 ವರ್ಷದಿಂದ ಬೇರೆ ಬೇರೆ ಇರುತ್ತಾರೆ. ಅವರು ಎಷ್ಟು ಎಕರೆ ಸಾಗುವಳಿ ಮಾಡುತ್ತಿದ್ದಾರೆ ಎಂದು ಗೊತ್ತಿರುವುದಿಲ್ಲ. ಅವರ ಪಡಿತರ ಚೀಟಿಗಳು ಬೇರೆ ಬೇರೆ ಇರುತ್ತವೆ. ವರಹದಿಂದ ಅಸುಂಡಿ 40 ಕಿ. ಮೀ. ದೂರ ಇರುತ್ತದೆ. ವ್ಯವಸಾಯ ಮಾಡಲು ನಮ್ಮವು ಎತ್ತುಗಳು ಇರುವುದಿಲ್ಲ. ನಾನು ವರಹವನ್ನು ನೋಡಿರುತ್ತೇನೆ. ದಾವಾ ಆಸ್ತಿಗಳ ಚಕಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಇಂಗಳಗುಂದಿಯವರು ಹೊಲ, ದಕ್ಷಿಣಕ್ಕೆ ಕೊಪ್ಪದವರ ಹೊಲ ಹಾಗೂ ಉತ್ತರಕ್ಕೆ ರಸ್ತೆ ಇರುತ್ತದೆ. ಸದರಿ ಜಮೀನು ಮೂಲತಃ ಯಾರಿಂದ ಬಂದದ್ದು ಎಂದು ಗೊತ್ತಿರುತ್ತದೆ. ಎಂದೂ ಖರೀದಿ ಪತ್ರ ಆಗಿರುತ್ತದೆ ಗೊತ್ತಿರುವುದಿಲ್ಲ ಹಾಗೂ ನಾನು ಹೋಗಿರುವುದಿಲ್ಲ. ಸದರಿ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತದೆ ಎನ್ನುವುದು ನಿಜ. ದಾವಾ ಜಮೀನು ರೈತಾಪಿ ಹಕ್ಕಿನ ಜಮೀನು ಎನ್ನುವುದು ನಿಜ. ಹಿರೇಕೆರೂರು ತಹಶೀಲ್ದಾರರು ಹನುಮಂತಪ್ಪನಿಗೆ ಸದರಿ ಜಮೀನನ್ನು ಬಾಂಬೆ ಟೆನೆನ್ಸಿ ಕಾಯ್ದೆ ಅಡಿಯಲ್ಲಿ ಟಿ.ಇ.ಎನ್. ನಂಃ 40/63-64 ರ ಪ್ರಕಾರ ಅನುಮತಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ಭರಮಪ್ಪ ಶಾಖೆಗೆ

ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವರಹ ಗ್ರಾಮದಲ್ಲಿ ನಮ್ಮ ತಂದೆ ಹಾಗೂ ನಮ್ಮ ದೊಡ್ಡಪ್ಪಂದಿರು ವಾಸವಾಗಿದ್ದರು. ದಾವಾ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ನಾನು ಕಣ್ಣಾರೆ ಅದನ್ನು ನೋಡಿಲ್ಲ ಎನ್ನುವುದು ನಿಜ. ಯಾರ ಹೆಸರಿಗೆ ಖರೀದಿ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅಸುಂಡಿ ಗ್ರಾಮದ ಜಮೀನನ್ನು ಯಾರಿಂದ ಯಾವಾಗ ಖರೀದಿಗೆ ತೆಗೆದುಕೊಂಡಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ಹನುಮಂತಪ್ಪ ಹಾಗೂ ಭರಮಪ್ಪ ಇವರು ತಮ್ಮ ಜೀವಿತ ಕಾಲದಲ್ಲಿ ಹಾಗೂ ನಮ್ಮ ತಂದೆಯ ಸಹೋದರರ ಮತ್ತು 1 ನೇ ಪ್ರತಿವಾದಿಯ ಸಹೋದರರ ಜೀವಿತ ಕಾಲದಲ್ಲಿ ಪಾಲು ವಿಭಾಗವನ್ನು ಮಾಡಿಕೊಂಡಿರುವುದಿಲ್ಲ. ಅಸುಂಡಿ ಗ್ರಾಮದಲ್ಲಿ ಮನೆಗಳು ಹಾಗೂ ಆರ್. ಸಿ. ಸಿ. ಬಿಲ್ಡಿಂಗ ಇರುತ್ತವೆ ಎನ್ನುವುದು ನಿಜ. ಸರ್ವೆ ನಂಃ 291/ಇ ಹಾಗೂ 291/2 ಬಿ ಇವೆರಡು ಹಾಗೂ ಆರ್.ಸಿ. ಸಿ ಬಿಲ್ಡಿಂಗ್ ಮನೆಗಳನ್ನು ಈ ದಾವೆಯಲ್ಲಿ ಏಕೆ ಸೇರಿಸಿಲ್ಲ ಎಂದರೆ ಸಾಕ್ಷಿ ಅವುಗಳು ನಾವು ದುಡಿದು ಹಿಡಿದಂತಹ ಆಸ್ತಿಗಳು ಎಂದು ಹೇಳುತ್ತಾರೆ. ಸದರಿ ವಿಷಯವನ್ನು ದಾವೆಯಲ್ಲಿ ಬರೆಸಿಲ್ಲ. ಏಕೆ ಬರೆಸಿಲ್ಲ ಎಂದು ಕಾರಣವನ್ನು ದಾವೆಯಲ್ಲಿ ಬರೆಸಿಲ್ಲ. ವರಹದಲ್ಲಿ 3 ಮನೆಗಳು ಇರುತ್ತವೆ. ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ 3 ಮನೆಗಳನ್ನು ಏಕೆ ಸೇರಿಸುತ್ತಾರೆ ಎಂದು ಏನು ಉತ್ತರ ಹೇಳಿರುವುದಿಲ್ಲ. ಸಮೂಹಿಕವಾಗಿ ಜಮೀನನ್ನ ಉಳುಮೆ ಮಾಡುತ್ತಾ ಬಂದಿರುತ್ತೇವೆ, ನಮ್ಮ ತಾತಾ ಮೃತಪಟ್ಟ ನಂತರ ಬಿಟ್ಟಿರುತ್ತೇವೆ. ನಮ್ಮ ತಾತ ಮೃತಪಟ್ಟು ಎಷ್ಟು ವರ್ಷವಾಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಾತ ಮೃತಪಟ್ಟ ನಂತರ ಉಳುಮೆ ಮಾಡುತ್ತಾ ಬಂದಿರುತ್ತದೆ. ಸದರಿ ಜಮೀನನ್ನು ನಾವು ಎಂದೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. 21 ಎಕರೆಯಲ್ಲಿ 10 ಎಕರೆಯನ್ನು ಮಾರಾಟ ಮಾಡಿರುತ್ತದೆ. 1963 ರಲ್ಲಿ 2000/- ರೂ.ಗಳಿಗೆ ಮಲ್ಲಪ್ಪ ಬಸವಣ್ಣೆಪ್ಪ ಕೊಪ್ಪದ ಇವರಿಗೆ ಭರಮಪ್ಪ ಹಾಗೂ ಹನುಮಂತಪ್ಪ ಸೇರಿ ಮಾರಾಟ ಮಾಡಿರುತ್ತಾರೆ. ನಮ್ಮ ದೊಡ್ಡಪ್ಪಂದರಿಗೆ ವಯಸ್ಸು 75 ರ ಒಳಗೆ ಇರುತ್ತವೆ. ನಮ್ಮ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ತಿಳುವಳಿಕೆಯಿಂದ ಜೀವನ ನಡೆಸುತ್ತಿದ್ದಾರೆ ಎನ್ನುವುದು ನಿಜ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಬಿದ್ದಾಡಪ್ಪ, ಬಸವಣ್ಣೆಪ್ಪ ಹಾಗೂ ಈರಪ್ಪ ಇವರ ಮಕ್ಕಳು ಬೇರೆ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. 1963 ರಲ್ಲಿ ಖರೀದಿಗೆ ಕೊಟ್ಟಾಗ ನಿನ್ನ ತಮ್ಮನ ಸಹಿ ಬೇಕು ಎಂದು ಹೇಳಿದಾಗ ಭರಮಪ್ಪನ ಸಹಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾಖಲೆಯ ಆಧಾರದ ಮೇಲೆ ಹೇಳುತ್ತಿದ್ದೇನೆ.

ಓ. ಎಸ್. ನಂಃ 52/2020
ಪಿ.ಡಬ್ಲ್ಯೂಃ 1

ಮುಂದುವರೆದ ಪಾಟೀ ಸವಾಲುಃ 1, 3 ರಿಂದ 15 ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 21-11-2022

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು